CENTRALLY SPONSORED INDUSTRIES IN THE STATE

944. SRI K. LAKKAPPA (Kunigal) .—Will the minister of Industries be pleased to state :—

(a) Whether centrally sponsored industries are contemplated to establish in the State this year ?

(b) If so, details there on and nature of such Industries ?

SRI S. M. YAHYA (Industries Minister) .—

(a) No However, the earlier proposal of Vijayanagar Steel Plant and Mangalore Refineries are yet to take final shape.

(b) Does not arise.

ನಷ್ಟದಲ್ಲಿ ನಡೆಯುತ್ತಿರುವ ಸರ್ಕಾರಿ ವಲಯದ ಉದ್ದಿಮೆಗಳು

೧೩೨೫. ಶ್ರೀ ಕೆ. ಲಕ್ಕಪ್ಪ (ಕುಣಿಗಲ್) .—ಮಾನ್ಯ ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ;

(ಅ) ನಷ್ಟದಲ್ಲಿ ನಡೆಯುತ್ತಿರುವ ಸರ್ಕಾರಿ ವಲಯದ ಉದ್ದಿಮೆಗಳ ಸಂಖ್ಯೆ ?

(ಆ) ರಾಜ್ಯದಲ್ಲಿ ಅವು ಅನುಭವಿಸುತ್ತಿರುವ ನಷ್ಟಕ್ಕೆ ಕಾರಣಗಳು ?

(ಇ) ಇಂತಹ ಸರ್ಕಾರಿ ವಲಯ ಉದ್ದಿಮೆಗಳನ್ನು ಪುನಶ್ಚೇತನಗೊಳಿಸಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕಾ, ಇಂಧನ ಮತ್ತು ವಕ್ಫ್ ಸಚಿವರು) .—

(ಅ) ೧೨

(ಆ) ೧. ಹಲವು ಉದ್ದಿಮೆಗಳು ತುಂಬಾ ಹಿಂದೆ ಸ್ಥಾಪಿತವಾಗಿವೆ ಹಾಗೂ ಇವುಗಳ ಆಧುನೀಕರಣ ಪುನಶ್ಚೇತನ ಹಾಗೂ ವಿಭಿನ್ನೀಕರಣಕ್ಕಾಗಿ ಗಣನೀಯ ಹಣದ ಅವಶ್ಯಕತೆ ಇರುವುದರಿಂದ.

೨. ಇನ್ನು ಕೆಲವು ರಾಜ್ಯ ಸರ್ಕಾರದ ಉದ್ದಿಮೆಗಳು ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಖಾಸಗೀ ರಂಗದ ಕಂಪನಿಗಳಂತೆ ಕಾರ್ಯಾಚರಣೆಯಲ್ಲಿ ಇಲ್ಲದೇ ಇರುವುದು.

೩. ಹೆಚ್ಚುವರಿ ಪ್ರಮಾಣದ ಬಂಡವಾಳ ಮತ್ತು ಕಡಿಮೆ ಪ್ರಮಾಣದಲ್ಲಿ ಯಂತ್ರಗಳ ಸಾಮರ್ಥ್ಯದ ಬಳಕೆ, ಮಾನವ ಶಕ್ತಿ, ಬೇಗಮುದ್ರೆ ಇತ್ಯಾದಿ ಕೈಗಾರಿಕಾ ಸಂಬಂಧಿತ ಸಮಸ್ಯೆಗಳು.

(ಇ) ರಾಜ್ಯ ಸರ್ಕಾರ ಉದ್ದಿಮೆಗಳ ಕಾರ್ಯಾಚರಣೆಯನ್ನು ಪರಿಶೀಲಿಸಿ ಇವುಗಳನ್ನು ಉತ್ತಮಗೊಳಿಸಲು ಪರಿಹಾರೋಪಾಯವನ್ನು ಶಿಫಾರಸ್ಸು ಮಾಡಲು ಸರ್ಕಾರವು ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಈ ಸಮಿತಿಯು ಇತ್ತೀಚೆಗೆ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ ಹಾಗೂ ಈ ವರದಿಯನ್ನು ಸಚಿವ ಸಂಪುಟದ ಉಪ-ಸಮಿತಿಯು ಅಧ್ಯಯನ ಮಾಡುತ್ತಿದೆ. ಸೂಕ್ತ ನಿರ್ಣಯವನ್ನು ಶೀಘ್ರದಲ್ಲೆ ತೆಗೆದುಕೊಳ್ಳಲಾಗುತ್ತದೆ.

ಮೇಲ್ಕಾಣಿಸಿದ ವಿಷಯವಲ್ಲದೆ ರಾಜ್ಯ ಸರ್ಕಾರವು ಸಾರ್ವಜನಿಕ ಉದ್ದಿಮೆಗಳ ಕಾರ್ಯಚರಣೆಯ ಮೇಲೆ ಪ್ರತಿ ತಿಂಗಳು ಉಸ್ತುವಾರಿ ಕಾರ್ಯಕೈಗೊಂಡಿದೆ. ಇದರಿಂದಾಗಿ ಹೆಚ್ಚಿನ ಗಮನಾರ್ಹ ಪ್ರಗತಿ ಕಂಡುಬಂದಿದೆ.